# ಕಲೆ ಮತ್ತು ಲೇಖಕರ ಬದ್ಧತೆ

ಸಮಕಾಲೀನ ಜಾಗತಿಕ ಸಾಹಿತ್ಯದಲ್ಲಿ ಜನಪ್ರಿಯವಾದ ಹಾಗೂ ಅಷ್ಟೇ ಮುಖ್ಯವಾದ ಹೆಸರು ಹರುಕಿ ಮುರಕಮಿಯದು. ಈ ಜಪಾನಿ ಲೇಖಕನ ಕೃತಿಗಳು ಜಗತ್ತಿನ 50 ಭಾಷೆಗಳಿಗೆ ಅನುವಾದಗೊಂಡಿವೆ ಎಂದರೆ ಅವನ ಕಥಾಸಾಹಿತ್ಯಕ್ಕಿರುವ ಓದುಗರ ಬೇಡಿಕೆಯನ್ನು ಅಂದಾಜಿಸಬಹುದು. ಈ ಲೇಖಕ ಬೀರಿರುವ ಪ್ರಭಾವ ಕೂಡ ಅಸಾಧಾರಣವಾದದ್ದೇ. ತನ್ನ ಕಥಾಸಾಹಿತ್ಯ ಹಾಗೂ ಬರವಣಿಗೆಯ ಕಸುಬುದಾರಿಕೆಯ ಕುರಿತಂತೆ ಈ ಸಂಚಿಕೆಯಲ್ಲಿರುವ ಸಂದರ್ಶನ(ಅನು: ಹೇಮಾ ಎಸ್.)ದಲ್ಲಿ ಅವನು ಮಾತನಾಡಿದ್ದಾನೆ. ಅದು ಹೊಸ ತಲೆಮಾರಿನ ಲೇಖಕರಿಗೆ ಮಾರ್ಗದರ್ಶಿಯಂತಿದೆ, ಸಾಹಿತ್ಯದ ವಿದ್ಯಾರ್ಥಿಗಳಿಗೆ ಪಾಠದಂತಿದೆ. ಮಹತ್ವದ ಬರಹಗಾರನ ಬರಹಲೋಕದ ಸಮೀಪದ ಪರಿಚಯವನ್ನು ಅದು ಮಾಡುತ್ತದೆ.

‘ಪ್ರತಿ ಬಾರಿ ಹೊಸ ಪುಸ್ತಕ ಬರೆಯುವಾಗ ಹಳೆಯ ಶೈಲಿಯನ್ನು ಒಡೆದು ಹೊಸತನ್ನು ಸೃಷ್ಟಿಸುತ್ತೇನೆ. ಹೊಸ ವಸ್ತು ಇಲ್ಲವೇ ಹೊಸ ದೃಷ್ಟಿಕೋನವನ್ನು ಪುಸ್ತಕಕ್ಕೆ ನೀಡುತ್ತೇನೆ. ವಿನ್ಯಾಸದ ಕುರಿತು ಯಾವಾಗಲೂ ಎಚ್ಚರದಿಂದಿರುತ್ತೇನೆ. ವಿನ್ಯಾಸ ಬದಲಾದರೆ ನನ್ನ ಗದ್ಯದ ಶೈಲಿ ಬದಲಾಗಬೇಕು, ನನ್ನ ಪಾತ್ರಗಳು ಅದಕ್ಕೆ ತಕ್ಕಂತೆ ಬದಲಾಗಬೇಕಾಗುತ್ತದೆ.’ ಎನ್ನುವ ಮುರಕಮಿ ತನ್ನ ಬರವಣಿಗೆಯ ಕುರಿತಂತೆ ವಹಿಸುವ ಎಚ್ಚರ, ಅದರ ಕ್ರಮದ ಕುರಿತಂತೆ ಸಂದರ್ಶನದಲ್ಲಿ ಹೇಳಿಕೊಂಡಿದ್ದಾನೆ. ತನ್ನ ಕಲೆಯ ಕುರಿತಂತೆ ಅವನಿಗಿರುವ ಬದ್ಧತೆ ಹಾಗೂ ಬರವಣಿಗೆಗೆ ಹಾಕುವ ಶ್ರಮ ಎಲ್ಲ ಶ್ರೇಷ್ಠ ಲೇಖಕರಲ್ಲಿ ಕಂಡುಬರುವ ಸಮಾನ ಅಂಶಗಳಾಗಿವೆ; ಅವು ಎಲ್ಲ ಕಲೆಗಳ ಅಂತಿಮ ಸತ್ಯವಾಗಿವೆ.




ಕನ್ನಡದ ಪ್ರತಿಭಾಶಾಲಿ ಲೇಖಕ ಕುಸುಮಾಕರ ದೇವರಗೆಣ್ಣೂರು ಅವರ ಪುಸ್ತಕ ‘ಕ್ರಾಂತದರ್ಶನ’ದ ಕುರಿತು ನರೇಂದ್ರ ಪೈ ಬರೆದ ವಿಮರ್ಶೆ ಈ ಸಂಚಿಕೆಯಲ್ಲಿದೆ. ‘ನಾಲ್ಕನೆಯ ಆಯಾಮ’, ‘ನಿರಿಂದ್ರಿಯ’, ‘ಪರಿಘ’ ಮತ್ತು ‘ಬಯಲು–ಬಸಿರು’ನಂತಹ ಮುಖ್ಯ ಕಾದಂಬರಿಗಳನ್ನು ಕನ್ನಡಕ್ಕೆ ಕೊಟ್ಟ ಲೇಖಕ ಕುಸುಮಾಕರ ದೇವರಗೆಣ್ಣೂರು. ದ.ರಾ. ಬೇಂದ್ರೆ ಅವರ ಕಾವ್ಯ–ವ್ಯಕ್ತಿತ್ವದ ಬಗ್ಗೆ ಹೊಸ ಹೊಳಹುಗಳನ್ನು ಕಾಣಿಸುವ ಈ ಪುಸ್ತಕದ ವಿಶ್ಲೇಷಣೆಯ ಬರಹ ಈ ಸಂಚಿಕೆಯ ಮುಖ್ಯ ಭಾಗವಾಗಿದೆ.

ವಿವಿಧ ವಿಷಯ ವಸ್ತುಗಳನ್ನು ಓದುಗರಿಗೆ ದರ್ಶಿಸುವ, ಪರಿಚಯಿಸುವ ಈ ಸಂಚಿಕೆಯಲ್ಲಿನ ಅಂಕಣಬರಹಗಳು ಕೂಡ ಬರವಣಿಗೆಯ ಬೆರಗಿನ ಕುರಿತೇ ಗಮನಸೆಳೆಯುತ್ತಿವೆ. ಕರ್ಕಿ ಕೃಷ್ಣಮೂರ್ತಿಯವರ ಅಂಕಣ, ಬರಹದ ಮಹತ್ವ ಮತ್ತು ಮನುಷ್ಯನ ಕಥನ ಶಕ್ತಿಯ ಬಗ್ಗೆ ಮಾತನಾಡುತ್ತದೆ. ಎಂ.ಎಸ್. ಶ್ರೀರಾಮ್ ಅವರ ಅಂಕಣದಲ್ಲಿ ಮನುಷ್ಯನ ಆರ್ಥಿಕ ಸೌಖ್ಯದ ಅತಿ ಮತ್ತು ಮಿತಿಯ ಜಿಜ್ಞಾಸೆ ಇದೆ.

ಬಾಳಿನ ಹಲವು ಮುಖಗಳಿಗೆ, ತವಕ–ಆತಂಕಗಳಿಗೆ, ಒಳಸುಳಿಗಳಿಗೆ ಇಲ್ಲಿನ ಅನೇಕ ಕತೆಗಳು ಕನ್ನಡಿ ಹಿಡಿದಿವೆ. ಮನುಷ್ಯ ಸ್ವಭಾವಗಳನ್ನು ಮುಟ್ಟಿ ತೋರಿಸುವ ಅವು ಓದುಗರನ್ನು ವಿಸ್ಮಯಕ್ಕೆ, ಚಿಂತನೆಗೆ, ಉಲ್ಲಾಸಕ್ಕೆ ಒಳಗು ಮಾಡಬಲ್ಲವು. ಮುಂದೆಯೂ ಚುರುಕಾದ, ಓದುಗರಿಗೆ ಹುರುಪು ತುಂಬುವ ಇಂತಹ ಬರಹಗಳನ್ನು ‘ಮಯೂರ’ ಓದುಗರಿಗೆ ನೀಡಲಿದೆ.

**ಮಯೂರ ಬಳಗ**